## ಒಡನಾಟ

ಬದುಕಲು ಬಹುಮುಖ್ಯವಾಗಿ ಬೇಕಾದ ಆರ್ಥಿಕ ಸ್ವಾತಂತ್ರ್ಯವಿಲ್ಲದ ಹೆಣ್ಣುಗಳು, ಹೊಸಲಿನಾಚೆಯ ಪ್ರಪಂಚವನ್ನು ಕಂಡಿಲ್ಲದ ಸ್ತ್ರೀಯರು ವ್ಯವಸ್ಥೆಗೆ ತಲೆಬಾಗಿ, ವಿಧಿಯಿಲ್ಲದೆ ಪುರುಷನ ಯಜಮಾನಿಕೆಯನ್ನು ಒಪ್ಪಿಕೊಳ್ಳಬೇಕಾದಂತಹ ಕಾಲ ಇತ್ತು. ಆ ಕಾಲಮಾನದ ಕತೆಗಳಲ್ಲಿ ಇದ್ದುದನ್ನು ಇದ್ದಂತೆ ನಾನು ನಿರೂಪಿಸಿದ್ದೇನೆ. ಬದಲಾದ ಕಾಲದಲ್ಲಿ ಸಶಕ್ತರಾಗಿ ತಮ್ಮ ಬದುಕನ್ನು ಸ್ವತಂತ್ರವಾಗಿ ಕಲ್ಪಿಸಿಕೊಂಡು ಬದುಕುವ ಎಷ್ಟೋ ಕಥಾಪಾತ್ರಗಳನ್ನು ನಾನು ರಚಿಸಿದ್ದೇನೆ. ಹೆಣ್ಣು ಯಾವತ್ತೂ ಅಬಲೆ ಅನ್ನುವಂತಹ ನಿಲುವು ಖಂಡಿತಾ ನನ್ನದಲ್ಲ. ಕಾಲಬದಲಾದಂತೆ ಹೆಣ್ಣು ಸ್ವಾಭಿಮಾನದ ಬದುಕು ಕಲ್ಪಿಸಿಕೊಂಡು ತಲೆಯೆತ್ತಿ ನಿಂತಿದ್ದಾಳೆ. ಸಮಾಜದ ಪ್ರತಿಬಿಂಬವಾಗಿರುವ ಕಥಾಪಾತ್ರಗಳಲ್ಲಿ ಇವು ತನ್ನಷ್ಟಕ್ಕೆ ತಾನೆ ಬಂದಿವೆ.

- ನೀವು ಲಲಿತಪ್ರಬಂಧಗಳನ್ನು ಅಷ್ಟೇ ರಸವತ್ತಾಗಿ ಬರೆಯುತ್ತೀರಿ. ನಿಮ್ಮ ಒಂದು ಪ್ರಬಂಧದಲ್ಲಿ 'ಯಜಮಾನರು ಊದೋದನ್ನ ಬಿಟ್ಟು ವದರೋದನ್ನ ಹಿಡಿದುಕೊಂಡರು' ಎಂದು ಬರೆದಿದ್ದೀರಿ. ಈ ಕುರಿತು ಒಂದಿಷ್ಟು ಮಾತು...

'ಕೂಡಿ ಬಾಳಿದರೆ ಸ್ವರ್ಗ ಸುಖ' ಎನ್ನುವ ನನ್ನ ಲಲಿತಪ್ರಬಂಧದಲ್ಲಿ ಈ ಹೇಳಿಕೆ ಬಂದಿದೆ. ಯಜಮಾನರು ಸಿಗರೇಟು ಬಿಟ್ಟು ಜರ್ದಾ ಬೀಡಾ ಅಭ್ಯಾಸ ಮಾಡಿಕೊಂಡಿದ್ದರ ಕುರಿತು ಹೇಳಿದ್ದು ಈ ಮಾತು. ಎರಡೂ ಒಳ್ಳೇ ಅಭ್ಯಾಸವೇನಲ್ಲ ಎನ್ನುವುದನ್ನು ವಿಡಂಬನಾತ್ಮಕವಾಗಿ ಹೀಗೆ ಹೇಳಿದ್ದೇನೆ.

- ದಾಂಪತ್ಯದ ವ್ಯಾಖ್ಯಾನ ಬದಲಾಗಿದೆ ಎಂದು ಅನ್ನಿಸುತ್ತಿದೆಯೇ? ಏಕೆಂದರೆ ಈಗ ದಾಂಪತ್ಯದ ವಿಘಟನೆಗಳು ಹೆಚ್ಚಾಗಿ ನಡೆಯುತ್ತಿವೆ. ಈಗ ಏನಿದ್ದರೂ ಸಣ್ಣ ಸಂಸಾರಗಳ ಕಾಲ. ಬದಲಾಗುತ್ತಿರುವ ಬದುಕಿನ ಹಿನ್ನೆಲೆಯಲ್ಲಿ ಈ ಪ್ರಶ್ನೆ.

ದಾಂಪತ್ಯದ ವ್ಯಾಖ್ಯಾನ ಖಂಡಿತಾ ಬದಲಾಗಿದೆ. ಅಡುಗೆ ಮನೆಯ ನಾಲ್ಕು ಗೋಡೆಗಳ ನಡುವೆ ಸೀಮಿತವಾಗಿದ್ದ ಹೆಣ್ಣು ಗಂಡಿನ ಸರಿಸಮನಾಗಿ ಉದ್ಯೋಗ ಮಾಡಲಾರಂಭಿಸಿದ ಮೇಲೆ ಮನೆ ಕೆಲಸದ ಹೊರೆಯನ್ನು ಗಂಡನಾದವನು ಹಂಚಿಕೊಳ್ಳುವ ಅಗತ್ಯ ಅನಿವಾರ್ಯತೆ ಈ ಕಾಲದ್ದು. ಅಷ್ಟು ಮಾತ್ರವಲ್ಲ, ಹೊರಗೆ ದುಡಿಯುವ ಹೆಣ್ಣಿನ ಅನಿವಾರ್ಯತೆಯನ್ನು ಕೂಡಾ ಅವನು ಅರ್ಥ ಮಾಡಿಕೊಳ್ಳಬೇಕಾಗಿದೆ. ಯಾರ ಮೇಲೆ ಯಾರೂ ಯಜಮಾನಿಕೆ, ದರ್ಪ ತೋರಿಸಲು ಸಾಧ್ಯವಾಗದಂತಹ ಒಂದು ಸಂಕೀರ್ಣ ಕಾಲಘಟ್ಟ ಈಗಿನದು. ಸ್ವಪ್ರತಿಷ್ಠೆ ಅನ್ನುವುದು ಅಗತ್ಯಕ್ಕಿಂತ ಸ್ವಲ್ಪ ಹೆಚ್ಚಾದರೂ ಕುಟುಂಬದಲ್ಲಿ ಬಿರುಕು ಮೂಡುವ ಸಾಧ್ಯತೆ ಇದೆ. ಸ್ವಾಭಿಮಾನ ಮತ್ತು ದುರಭಿಮಾನದ ನಡುವಿನ ಎಳೆ ತುಂಬಾ ಸೂಕ್ಷ್ಮವಾಗಿಬಿಟ್ಟಿದೆ. ಹಿಂದೊಂದು ಕಾಲದ ಕೂಡುಕುಟುಂಬ ಈಗ ಹಳೆಗಾಲದ ಕತೆಯಾಗಿದೆ ಎಂದರೆ ಅದಕ್ಕೆ ಪ್ರಮುಖ ಕಾರಣ ಹೊಂದಾಣಿಕೆಯ ಮನೋಧರ್ಮದ ಕೊರತೆ. ಅದರ ಅರ್ಥ ಕುಟುಂಬ ಅಂದರೆ ಗಂಡ, ಹೆಂಡತಿ ಮತ್ತು ಒಂದೋ, ಎರಡೋ ಮಕ್ಕಳು ಎನ್ನುವಲ್ಲಿಗೆ ಸೀಮಿತವಾಗಿಬಿಟ್ಟಿದೆ. ಪಾಶ್ಚಾತ್ಯ ಸಂಸ್ಕೃತಿಯ ಅನುಕರಣೆಯ ಪ್ರಭಾವ ಈ ಮನೋಧರ್ಮದ ಹಿಂದಿರುವುದನ್ನು ಅಲ್ಲಗಳೆಯುವಂತಿಲ್ಲ. ಬೇಕಾಗಿಯೋ, ಬೇಡವಾಗಿಯೋ ಸಮಾಜ ಈ ಬದಲಾವಣೆಯನ್ನು ಒಪ್ಪಿಕೊಂಡುಬಿಟ್ಟಿದೆ. ಅವರವರ ತಲೆಗೆ ಅವರವರದೇ ಕೈ ಎನ್ನುವ ಗಾದೆ ಮಾತು ನಿಜವಾಗಿದೆ.